ಸಿಸಿ ನಂಃ 2671/2021
ಸಿ.ಡ್ಬ್ಲೂ14/ಪಿ.ಡಬ್ಲ್ಯೂ 7

**3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಸಿಜೆಎಂ ರವರ ನ್ಯಾಯಾಲಯ ಧಾರವಾಡ.**

**ಸಿಸಿ ನಂಃ 2671/2021**

| | | |
|---|---|---|
| ಸಾಕ್ಷಿದಾರರ ಹೆಸರು | ಃ | ರಶ್ಮಿ ಎಚ್ ಬಿ |
| ತಂದೆಯ ಹೆಸರು | ಃ | ಸಿದ್ದಪ್ಪ |
| ವಯಸ್ಸು | ಃ | 30 ವರ್ಷ |
| ಉದ್ಯೋಗ | ಃ | ಮಹಿಳಾ ಪೋಲಿಸ್ ಪೇದೆ, ಮಾಗಡಿ ರೋಡ , ಪೋಲಿಸ್ ಠಾಣೆ |
| ವಾಸ ಸ್ಥಳ | ಃ | ಬೆಂಗಳೂರು . |

ಸತ್ಯ ಪ್ರತಿಜ್ಞೆ ಮಾಡಿಸಲಾಯಿತು ಃ **22-03-2024**

**ಮುಖ್ಯ ವಿಚಾರಣೆ ಃ ಮಾನ್ಯ ಹಿಸಸಅ ರವರಿಂದ**

ನಾನು 2018 ರಿಂದ ಇಲ್ಲಿಯವರೆಗೆ ಮಾಗಡಿ ರೊಡ್ ಪೋಲಿಸ್ ಠಾಣೆಯಲ್ಲಿ ಮಹಿಳಾ ಪೋಲಿಸ್ ಪೇದೆ ಎಂದು ಕರ್ತವ್ಯ ನಿರ್ವಹಿಸುತ್ತಿದ್ದೆನೆ .

ಈ ಪ್ರಕರಣ ಆರೋಪಿ ಸಲಿಮ ಇರಾಣಿ ಎನ್ನುವವನನ್ನು ನಮ್ಮ ಠಾಣೆಯ ಸಿಬ್ಬಂದಿಗಳು ನಮ್ಮ ಠಾಣಾ ಗುನ್ನಾ ನಂಃ 158/2020 ಮತ್ತು 169/2020 ರ ತನಿಖೆಗಾಗಿ ಧಾರವಾಡಕ್ಕೆ ಬಂದಾಗ ಸದರಿ ಆರೋಪಿ ನಮ್ಮ ಸಿಬ್ಬಂದಿಗಳ ಮೇಲೆ ಹಲ್ಲೆ ಮಾಡಿದ್ದ . ಆ ಬಗ್ಗೆ ಧಾರವಾಡ ಶಹರ ಪೋಲಿಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು . ಸದರಿ ಆರೋಪಿತನನ್ನು ಧಾರವಾಡ ಶಹರ ಪೋಲಿಸರು ದಸ್ತಗಿರಿ ಮಾಡಿದಾಗ ನಮ್ಮ ಠಾಣೆಯ ಸದರ ಪ್ರಕರಣ ವಿಚಾರಣೆಗಾಗಿ ಸದರಿ ಆರೋಪಿತನನ್ನು ಬಾಡಿ ವಾರಂಟ್ ಮೇಲೆ ಪಡೆದುಕೊಂಡು ವಿಚಾರಣೆಗಾಗಿ ನಮ್ಮ ಠಾಣೆಗೆ ಕರೆದುಕೊಂಡು ಬಂದಿದ್ದರು. ಸದರಿ ಆರೋಪಿತನನ್ನು ವಿಚಾರಿಸಿದಾಗ ಆತನ ಬೆಂಗಳೂರಿನ ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ಮತ್ತು ಇತರೆ ಸ್ಥಳಗಳಲ್ಲಿ ಮಹಿಳೆಯ ಸರ ಸುಲಿಗೆ ಮಾಡಿ ಅಪರಾಧ ಮಾಡಿರುವುದು ತಿಳಿದು ಬಂದಿತ್ತು . ಸದರಿ ಆರೋಪಿ ತನ್ನ ಜೊತೆ ಇತರೇ

ಆರೋಪಿತರು ಶಾಮಿಲಾಗಿದ್ದಾರೆ ಎಂದು ಹೇಳಿದ್ದ . ಆದ್ದರಿಂದ ಸದರಿ ಆರೋಪಿತರ ಪತ್ತೆಗಾಗಿ ನಾನು ಮತ್ತು ವಿಜಯ ನಗರ ಪೋಲಿಸ್ ಠಾಣೆಯ ಅಪರಾಧ ದಳದ ಸಿಬ್ಬಂದಿಗಳಾದ ಚಾಸಾ-13, 15 ರಿಂದ 18 , 20, 21 ರವರು ಹಾಗೂ ಇತರೇ ಸಿಬ್ಬಂದಿಗಳು ಸೇರಿ ಧಾರವಾಡಕ್ಕೆ ಬಂದಿದ್ದೆವು . ನಾವು ಧಾರವಾಡದಲ್ಲಿರುವ ಇರಾಣಿ ಕಾಲನಿಗೆ ಹೋಗಿದ್ದೆವು . ಅಲ್ಲಿ ಅವುನು ಇರಾಣಿ , ಆಜಾದ ಇರಾಣಿ , ಭಾನು ಇರಾಣಿ , ಪಾತಿಮಾ ಅಕ್ತರ ಮತ್ತು ಗುಲ್ಜಾರ ರವರನ್ನು ವಿಚಾರಣೆಗಾಗಿ ನಮ್ಮ ಠಾಣೆಗೆ ಕರೆದುಕೊಂಡು ಹೋಗಿದ್ದೆವು . ಆ ಬಗ್ಗೆ ನಾನು ತನಿಖಾಧಿಕಾರಿಗಳ ಮುಂದೆ ನನ್ನ ಹೇಳಿಕೆ ನೀಡಿರುತ್ತೇನೆ . ಆ ದಿನ ನಾವು ವಿಚಾರಣೆಗೆ ಕರೆದುಕೊಂಡು ಹೋದ ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ . ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ನೋಡಿ ಅವರ ಹೆಸರು ಭಾನು ಇರಾಣಿ ಹಾಜರಿದ್ದಾರೆ ಎಂದು ಉತ್ತರಿಸಿರುತ್ತಾರೆ . ಸದರಿ ಆರೋಪಿತರನ್ನು ವಿಚಾರಿಸಿದಾಗ ಅವರು ಸರಗಳ್ಳತನ ಮಾಡಿರುವ ಸರಗಳನ್ನು ಬಂಗಾರದ ಅಂಗಡಿಗಳಲ್ಲಿ ಅಡುವು ಇಟ್ಟಿರುವುದಾಗಿ ತಿಳಿದು ಬಂದಿತ್ತು . ಅವರು ತಾವು ಅಡುವು ಇಟ್ಟ ಆಭರಣಗಳ ಅಂಗಡಿಗಳನ್ನು ತೊರಿಸುವುದಾಗಿ ಹೇಳಿದ್ದರಿಂದ ದಿಃ 17.12.2020 ರಂದು ಆರೋಪಿತರಾದ ಭಾನು ಇರಾಣಿ ಮತ್ತು ಪಾತಿಮಾ ಅತ್ತರ ಇವರನ್ನು ಕರೆದುಕೊಂಡು ನಾನು , ಚಾಸಾ-15 , 20 ರಿಂದ 23, 25 ರಿಂದ 32 ರವರು ಧಾರವಾಡದ ಶಹರ ಪೋಲಿಸ್ ಠಾಣೆಗೆ ಬಂದಿದ್ದೆವು . ನಂತರ ಆರೋಪಿತರು ನೀಡಿದ ಮಾಹಿತಿ ಮೇರೆಗೆ ಶಿವಾಜಿ ನಗರದಲ್ಲಿದ್ದ ಬಂಗಾರದ ಅಂಗಡಿಗಳಿಗೆ ಹೋಗಿದಾಗ ಸಂದರಿ ಆರೋಪಿತರು ಸದರಿ ಅಂಗಡಿಯ ಮಾಲೀಕರನ್ನು ತೊರಿಸಿ ಅವರಿಗೆ ತಾವು ಕಳುವು ಮಾಡಿದ ಬಂಗಾರದ ಆಭರಣಗಳನ್ನು ನೀಡಿರುವುದಾಗಿ ಹೇಳಿದ್ದರು . ನಾವು ಗಣಪತಿ ಜುವೆಲರ್ಸ ಅಂಗಡಿಗೆ ಹೋಗಿದ್ದೆವು . ಸದರಿ ಅಂಗಡಿಯ ಮಾಲೀಕ ಆ ದಿನ ಒಟ್ಟು 16 ವಡವೆಗಳನ್ನು ನಮ್ಮ ಸಮಕ್ಷಮ ಹಾಜರುಪಡಿಸಿದ್ದ . ಅವುಗಳನ್ನು ಪಿ ಐ ರವರು ಜಪ್ತುಪಡಿಸಿಕೊಂಡಿದ್ದರು . ಆಗ ಸದರಿ ಸ್ಥಳದಲ್ಲಿ ಪಂಚನಾಮೆ ಮಾಡಿದ್ದರು . ಅದರ ದೃಡೀಕೃತ ನಕಲನ್ನು ನಾನು ಈಗ ನೋಡಿ ಗುರುತಿಸಿದ್ದು ಅದನ್ನು ನಿಶಾನೆ-ಪಿ-10 ಎಂದು ಗುರುತಿಸಲಾಯಿತು . ಸದರಿ

ಪಂಚನಾಮೆಗೆ ನಾನು ಸಹ ಸಹಿ ಮಾಡಿರುತ್ತೇನೆ . ಅದೇ ಕಾಲಕ್ಕೆ ಈಗ ನಾನು ನೋಡುತ್ತಿರುವ ಫೋಟೋಗಳನ್ನು ಸಹ ತೆಗೆದಿದ್ದರು . ಸದರಿ ಫೋಟೋಗಳನ್ನು ನಿಶಾನೆ-ಪಿ-11 ಮತ್ತು 12 ಎಂದು ,( ಕಲಂ 65 (ಬಿ) ಪ್ರಮಾಣ ಪತ್ರ ಹಾಜರುಪಡಿಸುವ ಷರತ್ತಿನೊಂದಿಗೆ ) ಗುರುತಿಸಲಾಯಿತು . ಆ ದಿನ ಜಪ್ತುಪಡಿಸಿಕೊಂಡ ವಡವೆಗಳನ್ನು ನೋಡಿದರೆ ಗುರುತಿಸುತ್ತೇನೆ . ಸದರಿ ಪಂಚನಾಮೆ ಕಾಲಕ್ಕೆ ಚಾಸಾ-4 ಮತ್ತು 5 ರವರು ಪಂಚರಾಗಿ ಹಾಜರಿದ್ದರು . ನಿಶಾನೆ-ಪಿ-12 ರ ಫೋಟೋದಲ್ಲಿ ಬಲಗಡೆಯಿಂದ ಎರಡನೇಯವರು ಸದರಿ ಬಂಗಾರದ ಅಂಗಡಿಯ ಮಾಲಿಕರಾಗಿದ್ದರು . ಅವರ ಹೆಸರು ವೆಂಕಟೇಶ ಎಂದು ಇತ್ತು . ಅದೇ ದಿನ ಬೇರೆ ಬೇರೆ ಅಂಗಡಿಯಲ್ಲಿ ಸಹ ವಡವೆಗಳನ್ನು ಜಪ್ತುಪಡಿಸಿಕೊಂಡ್ಡೆವು . ಆ ಬಗ್ಗೆ ತನಿಖಾಧಿಕಾರಿಗಳ ಮುಂದೆ ನಾನು ನನ್ನ ಹೇಳಿಕೆ ನೀಡಿರುತ್ತೇನೆ.

**ಪಾಟೀಸವಾಲು ಃ 1 ನೇ ಆರೋಪಿ ಪರ ಶ್ರೀ ಸಿ ಎ ಎಂ ವಕೀಲರಿಂದ**

ಸಲಿಮ ಇರಾಣಿ ಆರೋಪಿತನಾಗಿದ್ದ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ಆತ ಇರಾಣಿ ಕಾಲನಿಯಲ್ಲಿನ ಇತರೇ ಆರೋಪಿತರು ಭಾಗಿಯಾಗಿದ್ದರು ಎಂದು ಹೇಳಿದ್ದ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ಆತ ಬೆಂಗಳೂರು ಮತ್ತು ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ಸರಗಳ್ಳತನ ಮಾಡುತ್ತಿದ್ದ ಎಂದು ಹೇಳಿದ್ದ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ .

**ಪಾಟೀಸವಾಲು ಃ 3 ಮತ್ತು 4 ನೇ ಆರೋಪಿ ಪರ ಶ್ರೀ ಐ ಐ ಎಸ್ ವಕೀಲರಿಂದ**

ನಾವು ಬೆಂಗಳೂರಿನಿಂದ ಧಾರವಾಡಕ್ಕೆ ಬಂದ ಗುನ್ನಾ ನಂಬರ ನನಗೆ ನೆನಪಿಲ್ಲ . ಚಾಸಾ-16 ರಿಂದ 32 ಪೋಲಿಸ ಸಿಬ್ಬಂದಿಗಳು ಎಂದರೆ ಸರಿ . ಉಳಿದ ಪೋಲಿಸ ಸಿಬ್ಬಂದಿಗಳು ಬಂದ ವಾಹನ ನಂಬರ ನನಗೆ ಗೊತ್ತಿಲ್ಲ . ಆ ದಿನ ಇರಾಣಿ

ಕಾಲನಿಯಲ್ಲಿ ನಾವು ಆರೋಪಿತರನ್ನು ಬೆಃ 9.00 ಗಂಟೆಗೆ ದಸ್ತಗಿರಿ ಮಾಡಿದ್ದೆವು . ಸದರಿ ಎಲ್ಲಾ ಆರೋಪಿತರನ್ನು ಯಾವ ಸ್ಥಳಗಳಲ್ಲಿ ದಸ್ತಗಿರಿ ಮಾಡಿದ್ದೆವೋ , ಇಲ್ಲವೋ ನನಗೆ ಗೊತ್ತಿಲ್ಲ . ಆ ದಿನ ಆರೊಪಿತರನ್ನು ನಾವು ದಸ್ತಗಿರಿ ಮಾಡಿದ್ದರೂ ಸಹ ಇರಾಣಿ ಕಾಲನಿಯಲ್ಲಿ ಅವರನ್ನು ದಸ್ತಗಿರಿ ಮಾಡಿದ್ದೆವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ .

ಆ ದಪಿನ ನಾವು ಶಿವಾಜಿ ನಗರ ಬಂಗಾರದ ಅಂಗಡಿಗೆ ಬೆಳಗ್ಗೆ ಅಂದಾಜು 11.45 ರಿಂದ 12.00 ಗಂಟೆ ಸಮಯಕ್ಕೆ ಬಂದಿದ್ದೆವು . ಆ ದಿನ ನಾನು ಮತ್ತು ನಮ್ಮ ಸಿಬ್ಬಂದಿಗಳು ಮತ್ತು ನಮ್ಮ ಪಿ ಐ ರವರು ಒಟ್ಟಿಗೆ ಸದರಿ ಸ್ಥಳಕ್ಕೆ ಬಂದಿದ್ದೆವು . ಆ ದಿನ ಸಂಬಂಧಿಪಟ್ಟ ಪೋಲಿಸ್ ಠಾಣೆಗೆ ಮಾಹಿತಿ ನೀಡಿದ್ದರೋ , ಇಲ್ಲವೊ ನನಗೆ ಗೊತ್ತಿಲ್ಲ ಅದು ನಮ್ಮ ಪಿ ಐ ರವರಿಗೆ ಗೊತ್ತು . ಆ ದಿನ ನಾವು ಮೊದಲು ಗಣಪತಿ ಜುವೆಲರ್ಸ ಅಂಗಡಿಗೆ ಅಂದಾಜು 11.30 ಗಂಟೆಗೆ ಹೋಗಿದ್ದೆವು . ಪಂಚರು ಧಾರವಾಡದವರು ಆಗಿದ್ದರು . ಆ ದಿನ ಸದರಿ ಅಂಗಡಿಯಲ್ಲಿ ಯಾವುದೇ ಪಂಚನಾಮೆ ಆಗಿರಲಿಲ್ಲ ಎಂದರೆ ಸರಿಯಲ್ಲ . ಸದರಿ ಅಂಗಡಿಯಿಂದ ಯಾವುದೇ ವಡವೆಗಳನ್ನು ಜಪ್ತುಪಡಿಸಿಕೊಂಡಿರಲಿಲ್ಲ ಎಂದರೆ ಸರಿಯಲ್ಲ . ಬೇರೆ ಬೇರೆ ಅಂಗಡಿಗಳಲ್ಲಿ ಸಹ ಆ ದಿನ ಪಂಚನಾಮೆ ಮಾಡಲಾಗಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ಸದರಿ ಮುದ್ದೆ ಮಾಲಿಗಳಿಗೂ , ಆರೋಪಿತರಿಗೂ ಮತ್ತು ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ .

**ಪಾಟೀಸವಾಲು ಃ 2 ನೇ ಆರೋಪಿ ವಕೀಲರು ಮೇಲಿನ ಪಾಟೀಸವಾಲನ್ನು ಅನುಕರಿಸಿಕೊಂಡಿರುತ್ತಾರೆ .**

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

3 ನೇ ಹೆ ಹಿ ದಿ ನ್ಯಾ ಹಾಗೂ ಸಿಜೆಎಂ., ಧಾರವಾಡ.